# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\1964\2013\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:17/05/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ದೊಡ್ಡಯ್ಯ ಬಿನ್ ಲೇ.ಕರಿಯಣ್ಣ, ದಿಣ್ಣೇ ಗೊಲ್ಲರಹಟ್ಟಿ, ಬ್ರಹ್ಮಸಮುದ್ರ ಅಂಚೆ, ಐಡಿ ಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕ್, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ಐಡಿ ಹಳ್ಳಿ ಹೋಬಳಿ ಬ್ರಹ್ಮಸಮುದ್ರ ಅಂಚೆ ದಿಣ್ಣೆಗೊಲ್ಲರಹಟ್ಟಿ ನಿವಾಸಿಯಾದ ಶ್ರೀ.ದೊಡ್ಡಯ್ಯ ಬಿನ್ ಲೇ.ಕರಿಯಣ್ಣ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ತಹಶೀಲ್ದಾರ್ ಶ್ರೀ.ಆರ್.ರಮೇಶ್ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ಬ್ರಹ್ಮಸಮುದ್ರ ಮಜರಾ ದಿನ್ನೆ ಗೊಲ್ಲರಹಟ್ಟಿ ಗ್ರಾಮದ ಸರ್ವೆ ನಂ.143/36ನೇ ಬ್ಲಾಕ್‌ನ 3 ಎಕರೆ ಜಮೀನು ತಹಶೀಲ್ದಾರರವರ ಪ್ರಕರಣ ಸಂ:ಡಿಆರ್ 556/58-59ರಂತೆ ಶ್ರೀ.ಜಂಪಯ್ಯ ಬಿನ್ ದೊಡ್ಡಯ್ಯ ರವರಿಗೆ ಧರಖಾಸ್ತು ಮೂಲಕ ಮಂಜೂರಾಗಿದ್ದು, ಎಂಆರ್ ನಂ.12/61-62ರಂತೆ ಖಾತಾ ಬದಲಾವಣೆಯಾಗಿದೆ. ಸದರಿ ಜಮೀನನ್ನು ತಾನು ನೋಂದಣಿ ಸಂ:1460/68-69 ದಿ:19/07/1968ರಂದು ಕ್ರಯಕ್ಕೆ ಪಡೆದುಕೊಂಡಿದ್ದು, ಕ್ರಯದಂತೆ ಸ್ವಾಧೀನಾನುಭವ ಹೊಂದಿದ್ದು ಎಂಆರ್ ನಂ.26/68-69ರಂತೆ ಖಾತಾ ಬದಲಾವಣೆಯಾಗಿದೆ. ಮಂಜೂರಾತಿಯಂತೆ ಸದರಿ ಸ್ವತ್ತಿನಲ್ಲಿ ಪೋಡಿ ಮಾಡಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಮಧುಗಿರಿ ರವರಿಗೆ ಕಳುಹಿಸಿದ್ದು, ಸದರಿಯವರ ಕಛೇರಿಯಲ್ಲಿ ಎಲ್‌ಜಿಆರ್ ನಂ.214/58-59ರಂತೆ ಪೋಡಿ ವಹಿಯಲ್ಲಿ ದಾಖಲಾಗಿದೆ. ದಿ:29/09/1977ರಂದು ಎದುರುದಾರರ ಕಛೇರಿಗೆ ಪೋಡಿ ಕಾರ್ಯ ಪೂರೈಸಲು ಕಳುಹಿಸಲಾಗಿದೆಯೆಂದು ನಮೂದಾಗಿದೆ. ಆದರೆ, ಸದರಿ ಜಮೀನಿನಲ್ಲಿ ಡಿಆರ್

556/58–59ರಲ್ಲಿ ಮಂಜೂರಾಗಿರುವ ಯಾವ ರೈತರಿಗೂ ಸಹ ಮಂಜೂರಾಗದೆಯೇ ಉಳಿದುಕೊಂಡಿದೆ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ಎದುರುದಾರರ ಕಛೇರಿಯಲ್ಲಿ ಕಡತ ಕಳುವಾಗಿದ್ದು, ಈ ಬಗ್ಗೆ ದಾಖಲೆಯನ್ನು ಪುನರ್ ರಚಿಸಲು ಅನುಮತಿ ಕೋರಿ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಬಗ್ಗೆ ತಿಳಿಸಿದ್ದಾರೆ. ಆದರೆ, ಈವರೆವಿಗೂ ಸಹ ಸದರಿ ಜಮೀನಿನ ಪೋಡಿ ಮಾಡಲು ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಸದರಿ ಜಮೀನಿಗೆ ಸಂಬಂಧಪಟ್ಟಂತೆ ದೂರುದಾರರು ಪೋಡಿ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದು, ದುರಸ್ತಿ ಕಾರ್ಯ ಪೂರೈಸಲು ಮಿಸ್ಸಿಂಗ್ ಕಡತವನ್ನು ದೃಢೀಕರಿಸಿ ತಯಾರಿಸಿ ಮೂಲ ಕಡತವನ್ನು ಇದೇ ಸಮ ಸಂಖ್ಯೆಯ ಪತ್ರದಂತೆ ಉಪವಿಭಾಗಾಧಿಕಾರಿಗಳಿಗೆ ಅನುಮತಿ ಕೋರಿ ಸಲ್ಲಿಸಿದೆ. ಅಲ್ಲದೇ, ಸದರಿ ಜಮೀನಿನಲ್ಲಿ ಮಂಜೂರಾತಿಯಂತೆ ದುರಸ್ತಿ ಕಾರ್ಯ ಪೂರೈಸಲು ಪುನಃ ದಾಖಲೆಗಳನ್ನು ಪುನರ್ ರಚಿಸಲು ಅನುಮತಿ ಕೋರಿ, ಉಪವಿಭಾಗಾಧಿಕಾರಿಗಳಿಗೆ ಕಡತ ಮಂಡಿಸಲಾಗಿದೆಯೆಂದು ಹೇಳಿದ್ದಾರೆ.

4. ದೂರಿಗೆ ವರದಿ ಸಲ್ಲಿಸುವಂತೆ ಮಧುಗಿರಿ ಉಪವಿಭಾಗಾಧಿಕಾರಿ (ಇನ್ನು ಮುಂದೆ, 'ತನಿಖಾಧಿಕಾರಿಗಳು' – ಎಂದು ಕರೆಯಲ್ಪಡುತ್ತಾರೆ) ಗಳನ್ನು ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ–

ಸದರಿ ಜಮೀನು ಎದುರುದಾರರ ಪ್ರಕರಣ ಸಂ:556/58–59ರಂತೆ ಶ್ರೀ.ಜಂಪಯ್ಯ ಬಿನ್ ದೊಡ್ಡಯ್ಯ ರವರಿಗೆ ಮಂಜೂರಾಗಿದ್ದು, ಸದರಿ ಜಮೀನನ್ನು ದೂರುದಾರರು 1968ರಂದು ಕ್ರಯಕ್ಕೆ ಪಡೆದಿದ್ದು, ಇದುವರೆವಿಗೂ ಸಹ ದುರಸ್ತಿ ಮಾಡಿಕೊಟ್ಟಿಲ್ಲ, ಮೂಲ ಮಂಜೂರಿ ಕಡತ ಲಭ್ಯವಿಲ್ಲದ ಕಾರಣ, ಮಿಸ್ಸಿಂಗ್ ಕಡತ ತಯಾರಿಸಿ, ಅನುಕೂಲ ಕಲ್ಪಿಸುವುದಾಗಿ ಈ ಹಿಂದೆ ಸಲ್ಲಿಸಿರುವ ವರದಿಯನ್ನು ಉಲ್ಲೇಖಿಸುತ್ತಾ, ಹಾಲೀ ಕಡತವು ಅಭಿಲೇಖಾಲಯದ ಕಡತಗಳನ್ನು ಕ್ಯಾಟಲಾಗಿಂಗ್ ಮತ್ತು ಇಂಡೆಕ್ಸಿಂಗ್ ಮಾಡಿದ ನಂತರ ಮೂಲ ಮಂಜೂರಿ ಕಡತವು ಕಛೇರಿಯ ಅಭಿಲೇಖಾಲಯದಲ್ಲಿ ಲಭ್ಯವಾಗಿದ್ದು, ಮಿಸ್ಸಿಂಗ್ ಕಡತವನ್ನು ತಯಾರಿಸುವ ಪ್ರಶ್ನೆ ಉದ್ಭವಿಸಿರುವುದಿಲ್ಲವೆಂದು ಹೇಳಿದ್ದಾರೆ. ಸದರಿ ಜಮೀನು ಗಣಕೀಕೃತ ಪಹಣಿ ಕಲಂ 3ರಲ್ಲಿ 122.18 ಎಕರೆ ಯಲ್ಲಿ 99 ಎಕರೆ ಖರಾಬು, ಉಳಿದ 23.20 ಎಕರೆ ಗುಂಟೆ ಎಂದು ನಮೂದಾಗಿದ್ದು, ಸದರಿ ಸರ್ವೆ ನಂಬರಿನಲ್ಲಿ 23.20 ಎಕರೆ ಜಮೀನು ಅರಣ್ಯ ಇಲಾಖೆ,

Sd/-

ಕರ್ನಾಟಕ ಸರ್ಕಾರ ಎಂದು ನಮೂದಾಗಿದ್ದು, ಆದರೆ ಸರ್ವೆಯರ್‌ರವರ ವರದಿಯಲ್ಲಿ ತಪ್ಪಾಗಿ 122.18 ಎಕರೆ ಎಂದು ನಮೂದಾಗಿದೆ. ಸದರಿ ಜಮೀನು ಶ್ರೀ.ಜಂಪಯ್ಯ ಬಿನ್ ದೊಡ್ಡಯ್ಯ ರವರಿಗೆ ದಿ:10/06/1962ರಲ್ಲಿ ಮಂಜೂರಾಗಿ ಸಾಗುವಳಿ ಚೀಟಿ ವಿತರಣೆಯಾಗಿದ್ದು, ಸದರಿ ಜಮೀನನ್ನು 15 ವರ್ಷಗಳ ಕಾಲ ಪರಭಾರೆ ಮಾಡಬಾರದಂತೆ ಷರತ್ತು ವಿದಿಸಲಾಗಿದ್ದು, ಆದರೆ ದಿ:19/03/1968ರಂದು ಅಂದರೆ, ಮಂಜೂರಾದ 6 ವರ್ಷದಲ್ಲಿ ಮಾರಾಟ ಮಾಡಿ ಷರತ್ತನ್ನು ಉಲ್ಲಂಘಿಸಿದ್ದಾರೆ. ಸದರಿ ಜಮೀನು ಮೂಲತಃ ಅರಣ್ಯ ಜಮೀನಾಗಿದ್ದು, ಅರಣ್ಯ ಇಲಾಖೆಗೆ ಸೇರಿದೆ. ಅರಣ್ಯ ಕಾಯಿದೆ ಅನ್ವಯ ಅರಣ್ಯ ಇಲಾಖೆಗೆ ಸೇರಿದ ಸದರಿ ಜಮೀನು ಡಿನೋಟಿಫಿಕೇಷನ್ ಆಗಬೇಕಾಗಿರುತ್ತದೆಂದು ರಾಜಸ್ವ ನಿರೀಕ್ಷಕರು ವರದಿ ಸಲ್ಲಿಸಿದ್ದಾರೆ. ಎದುರುದಾರರು ಈಗಾಗಲೇ ಅರಣ್ಯ ಇಲಾಖೆಗೆ ಸೂಚಿಸಿದ್ದು, ಅರಣ್ಯ ಇಲಾಖೆಯವರು ಅಗತ್ಯ ಕ್ರಮ ಕೈಗೊಂಡು ಡಿನೋಟಿಫಿಕೇಷನ್ ಆದೇಶವಾಗಿ ತಮ್ಮ ಇಲಾಖೆಗೆ ವರ್ಗಾವಣೆಯಾದ ನಂತರ ದುರಸ್ತಿ ಪಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ, ಡಿನೋಟಿಫಿಕೇಷನ್ ಆಗದಿದ್ದಲ್ಲಿ ಭೂ ಮಂಜೂರಾತಿಯನ್ನು ರದ್ದುಪಡಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:–

ಜಮೀನಿನ ಮೂಲ ಮಂಜೂರಾತಿದಾರರಾದ ಶ್ರೀ.ಜಂಪಯ್ಯ ಬಿನ್ ದೊಡ್ಡಯ್ಯ ರವರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದು, ಅದರ ಆಧಾರದ ಮೇಲೆ ದಿ:10/06/1962ರಂದು ಸರ್ವೆ ನಂ.143ರಲ್ಲಿ 3 ಎಕರೆ ಜಮೀನು ಮಂಜೂರಾಗಿ, ಸಾಗುವಳಿ ಚೀಟಿಯನ್ನು ವಿತರಿಸಲಾಗಿದೆ. ಸದರಿ ಸಾಗುವಳಿ ಚೀಟಿಯಲ್ಲಿ ಸದರಿ ಸ್ವತ್ತನ್ನು 15 ವರ್ಷಗಳ ಕಾಲ ಮಾರಾಟ ಮಾಡದಂತೆ, ಷರತ್ತು ವಿದಿಸಿದ್ದು, ಮಂಜೂರಾದ 6 ವರ್ಷಗಳಲ್ಲಿ ಅಂದರೆ, ದಿ:19/03/1968ರಲ್ಲಿ ಮಂಜೂರಾತಿದಾರರು ದೂರುದಾರರಿಗೆ ನೋಂದಾಯಿತ ಕ್ರಯ ಪತ್ರದಂತೆ ಮಾರಾಟ ಮಾಡಿರುವುದು ಕಂಡು ಬಂದಿದೆ. ಸದರಿ ಕ್ರಯ ಪತ್ರದಂತೆ ಹಕ್ಕು ಬದಲಾವಣೆ ವಹಿ ಮತ್ತು ಪಹಣಿ ಪತ್ರಿಕೆಗಳು ಸಹ ದೂರುದಾರರ ಹೆಸರಿಗೆ ನಮೂದಾಗಿದೆ. ಸದರಿ ಜಮೀನು 1966ರಲ್ಲಿ ಮಂಜೂರಾಗಿ 1968ರಲ್ಲಿ ದೂರುದಾರರಿಗೆ ಕ್ರಯಪತ್ರವಾಗಿದ್ದು, ಅದರಂತೆ ಪಹಣಿ ಪತ್ರಿಕೆಗಳು ನಮೂದಾಗಿರುವುದರಿಂದ, ಸಾಗುವಳಿ ಚೀಟಿಯ ಷರತ್ತುಗಳಲ್ಲಿ ವಿದಿಸಲಾದ ಷರತ್ತನ್ನು ಉಲ್ಲಂಘಿಸಿರುವ ಸಂಬಂಧ ಮಂಜೂರಾತಿಯನ್ನು ರದ್ದುಪಡಿಸುವ ಬಗ್ಗೆ ಈವರೆವಿಗೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ಅದೇ ರೀತಿ, ಸದರಿ ಜಮೀನಿಗೆ ಸಂಬಂಧಪಟ್ಟಂತೆ, ದೂರುದಾರರು ಕ್ರಯಕ್ಕೆ ಪಡೆದ ದಿನದಿಂದ ಈವರೆವಿಗೂ ಸಹ ಸದರಿ ಸ್ವತ್ತಿನಲ್ಲಿ ದುರಸ್ತಿ ಮಾಡಲು ಯಾವುದೇ ಕ್ರಮ ಕೈಗೊಂಡಿಲ್ಲ. ಆದರೆ, 2012ನೇ ವರ್ಷದಲ್ಲಿ ದೂರುದಾರರು ಸದರಿ ಜಮೀನಿನಲ್ಲಿ ದುರಸ್ತಿ ಕಾರ್ಯ ಕೈಗೊಳ್ಳುವಂತೆ ಅರ್ಜಿ ಸಲ್ಲಿಸಿರುವುದು

ಕಂಡು ಬಂದಿದೆ. ಆದರೆ, 1968ರ ಕ್ರಯ ಪತ್ರದಂತೆ ದಾಖಲೆಗಳನ್ನು ಪರಿವರ್ತಿಸಿ, ಪೋಡಿ ಕಾರ್ಯ ಮಾಡಿಕೊಡುವುದು ಎದುರುದಾರರ ಕರ್ತವ್ಯವಾಗಿದೆ. ಆದರೆ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸದರಿ ಜಮೀನು ಅರಣ್ಯ ಇಲಾಖೆಗೆ ಸಂಬಂಧಿಸಿದ್ದು, ಇಲ್ಲಿಯವರೆಗೂ ಸಹ ಕಂದಾಯ ಇಲಾಖೆಗೆ ವರ್ಗಾವಣೆಯಾಗಿಲ್ಲವೆಂದು ಮತ್ತು ಒಂದು ವೇಳೆ ಸದರಿ ಸ್ವತ್ತು ಅರಣ್ಯ ಇಲಾಖೆಯಿಂದ ಡಿನೋಟಿಫಿಕೇಷನ್ ಆಗಿ ಕಂದಾಯ ಇಲಾಖೆಗೆ ವರ್ಗಾವಣೆಯಾದ ನಂತರ ದುರಸ್ತಿ ಕಾರ್ಯ ಮಾಡಲಾಗುವುದು, ಒಂದು ವೇಳೆ ಡಿನೋಟಿಫಿಕೇಷನ್ ಆಗದಿದ್ದಲ್ಲಿ, ಮಂಜೂರಾತಿ ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದ್ದಾರೆ. ಆದರೆ, 1966ರಲ್ಲಿಯೇ ಸದರಿ ಜಮೀನು ದೂರುದಾರರಿಗೆ ಮಾರಾಟ ಮಾಡಿದ ಶ್ರೀ.ಜಂಪಯ್ಯ ಬಿನ್ ದೊಡ್ಡಯ್ಯ ರವರಿಗೆ ಮಂಜೂರಾಗಿ ಆ ನಂತರ, ದೂರುದಾರರ ಹೆಸರಿಗೆ ಕ್ರಯವಾಗಿರುವುದರಿಂದ, ಸದರಿ ಸ್ವತ್ತು ಅರಣ್ಯ ಇಲಾಖೆಗೆ ಸಂಬಂಧಿಸಿದ್ದೆಂದು ನಿರ್ಧರಿಸಲು ಸಾಧ್ಯವಿಲ್ಲ. ಸದರಿ ಸ್ವತ್ತು 1966ರಲ್ಲಿ ಮಂಜೂರಾಗಿ 1968ರಲ್ಲಿ ಕ್ರಯಪತ್ರದಂತೆ ಹಕ್ಕು ವರ್ಗಾವಣೆಯಾಗಿರುವುದರಿಂದ, ಸದರಿ ಸ್ವತ್ತಿನ ಬಗ್ಗೆ ಕ್ರಯಪತ್ರದಂತೆ ದುರಸ್ತಿ ಕಾರ್ಯ ಮಾಡಿಕೊಡುವುದು ಎದುರುದಾರರ ಕರ್ತವ್ಯವಾಗಿದೆ. ಸದರಿ ಸ್ವತ್ತು 1968ರಲ್ಲೇ ದೂರುದಾರರಿಗೆ ವರ್ಗಾವಣೆಯಾಗಿದ್ದು, ಕ್ರಯದಂತೆ ತಮ್ಮ ಹೆಸರಿಗೆ ಪೋಡಿ ಮಾಡಿಸಿಕೊಳ್ಳುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

6. ಆದ್ದರಿಂದ, ಕ್ರಯ ಪತ್ರದಂತೆ ಸದರಿ ಜಮೀನಿನಲ್ಲಿ ಕಾನೂನು ರೀತಿ ದುರಸ್ತಿ ಕಾರ್ಯ ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 18/05/17.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**